# ನಿಮ್ಮ ಟ್ವೀಟ್ ನಿಮ್ಮ ಧ್ವನಿ

■ ಶಶಿಕುಮಾರ್ ಸಿ.




ಸಾಮಾಜಿಕ ಜಾಲತಾಣಗಳಲ್ಲಿ ತನ್ನದೇ ಛಾಪು ಮೂಡಿಸಿರುವ ಟ್ವಿಟರ್, ಹೊಸ ವಿಧಾನದಲ್ಲಿ ಟ್ವೀಟ್ ಮಾಡುವತ್ತ ಗಮನಹರಿಸಿದೆ. ಅಕ್ಷರ ರೂಪದಲ್ಲಷ್ಟೇ ಇದ್ದ ಟ್ವೀಟ್ ಪ್ರಕ್ರಿಯೆಯನ್ನು ಕಂಪನಿಯು ಧ್ವನಿ (ಆಡಿಯೊ) ರೂಪಕ್ಕೂ ತರುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ.

'ನಿಮ್ಮ ಟ್ವೀಟ್ ನಿಮ್ಮ ಧ್ವನಿ' ಎಂಬ ಆಡಿಯೊ ಟ್ವೀಟ್ ಫೀಚರ್ ಅನ್ನು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಕೆಲಸ ಆರಂಭಿಸಿರುವ ಟ್ವಿಟರ್, ಈ ಬಗ್ಗೆ ತನ್ನ ಅಧಿಕೃತ ಬ್ಲಾಗ್‌ನಲ್ಲಿ ಮಾಹಿತಿಯನ್ನು ಹಂಚಿಕೊಂಡಿದೆ. ಈ ಆಯ್ಕೆಯು ಮೊದಲ ಹಂತವಾಗಿ ಐಫೋನ್‌ಗಳಲ್ಲಿ ಲಭ್ಯವಾಗಲಿದ್ದು, ಬಳಿಕ ಆ್ಯಂಡ್ರಾಯ್ಡ್ ಫೋನ್‌ಗಳಿಗೂ ವಿಸ್ತರಿಸಲಿದೆ.

ಅಕ್ಷರ ರೂಪದ ಟ್ವೀಟ್‌ಗೆ ಪರ್ಯಾಯವಾಗಿ ಆಡಿಯೊ ಟ್ವೀಟ್ ಅನ್ನು ಬಳಕೆದಾರರು ಬಳಸಬಹುದು. ಫೋಟೊಗಳು, ವಿಡಿಯೊಗಳು, ಜಿಪ್ಸ್ ಮತ್ತು ಇನ್ನಿತರ ಕ್ಯಾರೆಕ್ಟರ್‌ಗಳನ್ನು ಒಳಗೊಂಡಂತೆ ಟ್ವೀಟ್‌ಗಳನ್ನು ಇದುವರೆಗೂ ಮಾಡಬಹುದಾಗಿತ್ತು. 280 ಅಕ್ಷರಗಳು ಅಥವಾ ಕ್ಯಾರೆಕ್ಟರ್ಸ್‌ಗಳಿಗೆ ಮಾತ್ರ ಟ್ವೀಟರ್ ಮಾಡಲು ಮಿತಿ ಹೇರಿರುವುದರಿಂದ ಬಳಕೆದಾರರು ತಾವು ಅಂದುಕೊಂಡದ್ದನ್ನು ಒಂದೇ ಟ್ವೀಟ್‌ನಲ್ಲಿ ಹಂಚಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಈ ಸಮಸ್ಯೆಗೆ ಆಡಿಯೊ ಟ್ವೀಟ್ ಪರಿಹಾರವಾಗಲಿದೆ.

ಈ ಬಗ್ಗೆ ತನ್ನ ಬ್ಲಾಗ್‌ನಲ್ಲಿ ಬರೆದುಕೊಂಡಿರುವ ಟ್ವಿಟರ್, 'ಅಕ್ಷರ ಅಥವಾ ಕ್ಯಾರೆಕ್ಟರ್ಸ್‌ಗಳ ಮಿತಿಯಿಂದ ಟ್ವೀಟ್ ಮಾಡಲು ಸಮಸ್ಯೆಯಾಗುತ್ತಿತ್ತು. ಜೊತೆಗೆ ಟ್ವೀಟ್ ಬಳಕೆಯ ವಿಧಾನಕ್ಕೆ ಮಾನವೀಯ ಸ್ಪರ್ಶ ನೀಡುವ ಸಲುವಾಗಿ ಆಡಿಯೊ ಟ್ವೀಟ್ (ಬಳಕೆದಾರರ ಧ್ವನಿಯಾಧಾರಿತ ಟ್ವೀಟ್) ವಿಧಾನದ ಪರಿಶೀಲನೆಗೆ ನಾವು ಮುಂದಾಗುತ್ತಿದ್ದೇವೆ' ಎಂದು ಉಲ್ಲೇಖಿಸಿದೆ.

ನಿಮ್ಮ ಧ್ವನಿಯಿಂದಲೇ ಟ್ವೀಟ್ ಮಾಡುವ ವಿಧಾನವು ಅಕ್ಷರ ರೂಪದ ಟ್ವೀಟ್‌ಗಿಂತ ಹೆಚ್ಚೇನೂ ವಿಭಿನ್ನವಾದುದ್ದಲ್ಲ. ಆದರೂ ಟೆಕ್ಸ್ಟ್ ಬಾರ್‌ನ ಪಕ್ಕದಲ್ಲೇ ರೆಕಾರ್ಡ್ ಮಾಡುವ ಆಯ್ಕೆ ಇರಲಿದ್ದು, ಅದನ್ನು ಕ್ಲಿಕ್ ಮಾಡಿ ಆಡಿಯೊ ಟ್ವೀಟ್ ಮಾಡಬಹುದು. ಪ್ರತಿ ಆಡಿಯೊ ಟ್ವೀಟ್‌ಗೆ 140 ಸೆಕೆಂಡ್‌ಗಳ ಮಿತಿ ಇದ್ದು, ಅದು ಮುಕ್ತಾಯವಾಗುತ್ತಿದ್ದಂತೆ ಹೊಸ ಆಡಿಯೊ ಟ್ವೀಟ್ ತಾನಾಗಿಯೇ ಶುರುವಾಗಲಿದೆ. ಆಡಿಯೊ ಟ್ವೀಟ್ ರೆಕಾರ್ಡ್ ಮಾಡಿದ್ದು ಮುಕ್ತಾಯವಾದ ಬಳಿಕ ಡನ್ (Done) ಆಯ್ಕೆಯನ್ನು ಕ್ಲಿಕ್ಕಿಸುವ ಮೂಲಕ ಟ್ವೀಟ್ ಮಾಡಬಹುದು.

ಟ್ವಿಟರ್‌ನಲ್ಲಿ ನಿಮ್ಮನ್ನು ಫಾಲೊ ಮಾಡುವವರ ಟೈಮ್‌ಲೈನ್‌ನಲ್ಲೂ ಸಾಮಾನ್ಯ ಟ್ವೀಟ್‌ಗಳಂತೆ ಆಡಿಯೊ ಟ್ವೀಟ್ ಸಹ ಕಾಣಿಸಿಕೊಳ್ಳಲಿದೆ. ಆ ಟ್ವೀಟ್ ಮೇಲೆ ಒಮ್ಮೆ ಒತ್ತಿದರೆ ಅದು ಕೇಳಿಸುತ್ತದೆ. ಐಫೋನ್‌ಗಳಲ್ಲಿ ಬೇರೊಂದು ವಿಂಡೊ ತೆರೆದುಕೊಳ್ಳಲಿದ್ದು, ಆಡಿಯೊವನ್ನು ಕೇಳಿಸಿಕೊಳ್ಳುತ್ತಲೇ ಮೊಬೈಲ್‌ನಲ್ಲಿ ಬೇರೆ ಬೇರೆ ಕೆಲಸ ಮಾಡಬಹುದು.

## ಫ್ಲೀಟ್ಸ್; ಇದು ಟ್ವಿಟರ್ ಸ್ಟೇಟಸ್

ವಾಟ್ಸ್ಆ್ಯಪ್ ಸ್ಟೇಟಸ್‌ನಂತೆಯೇ ಟ್ವಿಟರ್ ಸಹ ಅಂಥದ್ದೇ ಮಾದರಿಯ 'ಫ್ಲೀಟ್ಸ್' ಎಂಬ ಆಯ್ಕೆಯನ್ನು ಅಭಿವೃದ್ಧಿಪಡಿಸಿದೆ. ಈ ಆಯ್ಕೆಯಲ್ಲೂ ಪ್ರಕಟಿಸುವ ಬರಹಗಳು 24 ಗಂಟೆಗಳ ಕಾಲ ಉಳಿಯಲಿದ್ದು, ನಂತರ ಕಣ್ಮರೆಯಾಗುತ್ತವೆ.

ಈಚೆಗಷ್ಟೇ ಈ ಫೀಚರ್ ಅನ್ನು ಟ್ವಿಟರ್ ಪರಿಚಯಿಸಿದೆ. ಸಾಮಾನ್ಯವಾಗಿ ಮಾಡುವ ಟ್ವೀಟ್‌ಗಳು ಶಾಶ್ವತವಾಗಿ ಉಳಿದುಬಿಡುತ್ತವೆ. ಅದಕ್ಕೆ ಬರುವ ಕಮೆಂಟ್‌ಗಳು ಹಾಗೂ ರೀಟ್ವೀಟ್‌ಗಳು ಸಹ ಹಾಗೇ ಉಳಿದುಬಿಡುತ್ತವೆ. ಹೀಗಾಗಿ, ಕೆಲವು ಟ್ವೀಟಿಗರು ತಮ್ಮ ಎಲ್ಲಾ ಅನಿಸಿಕೆಗಳನ್ನೂ ಟ್ವಿಟರ್‌ನಲ್ಲಿ ಮುಕ್ತವಾಗಿ ಹಂಚಿಕೊಳ್ಳುವುದಿಲ್ಲ. ಆದರೆ ವಾಟ್ಸ್ಆ್ಯಪ್ ಸ್ಟೇಟಸ್ ಮಾದರಿಯ ಫ್ಲೀಟ್ಸ್‌ನಲ್ಲಿ ಹೀಗಾಗದು. ಫ್ಲೀಟ್ಸ್‌ನಲ್ಲಿ ಮಾಡಿದ ಸ್ಟೇಟಸ್ ಅಪ್‌ಡೇಟ್‌ಗಳು 24 ಗಂಟೆಗಳ ವರೆಗೆ ಮಾತ್ರ ಕಾಣಿಸಿಕೊಳ್ಳುತ್ತವೆ. ನಂತರ ಅವು ಶಾಶ್ವತವಾಗಿ ಕಣ್ಮರೆಯಾಗುತ್ತವೆ. ಫ್ಲೀಟ್ಸ್ ಸ್ಟೇಟಸ್‌ಗೆ ಲೈಕ್ ಕೊಡಲು, ಕಮೆಂಟ್ ಮತ್ತು ರೀಟ್ವೀಟ್ ಮಾಡಲು ಸಾಧ್ಯವಿಲ್ಲ.

ಈ ಆಯ್ಕೆಯನ್ನು ಪಡೆಯಲು ಟ್ವಿಟರ್ ಆ್ಯಪ್ ಅಪ್‌ಡೇಟ್ ಮಾಡಬೇಕು. ಟ್ವಿಟರ್‌ನಲ್ಲಿ ಹಿಂಬಾಲಿಸುತ್ತಿರುವವರ ಟ್ವಿಟರ್ ಖಾತೆಗಳಿಂದ ಬರುವ ಫ್ಲೀಟ್ಸ್ ನಿಮ್ಮ ಟೈಮ್‌ಲೈನ್‌ನಲ್ಲಿ ಸದಾ ಕಾಣಿಸಿಕೊಳ್ಳುತ್ತವೆ. ಪ್ರಕಟಿಸಿದ ಫ್ಲೀಟ್ಸ್ ಯಾರೆಲ್ಲ ನೋಡಿದ್ದಾರೆ ಎಂಬುದನ್ನು ತಿಳಿಯಲು ಪೋಸ್ಟ್‌ನ ಕೆಳಭಾಗದ ವೀವರ್ಸ್ ಆಯ್ಕೆಯನ್ನು ಕ್ಲಿಕ್ಕಿಸಬೇಕು. ■

ಓಂ ✝ ☪ ಸರ್ವೇಜನಃ ಸುಖಿನೋ ಭವಂತು ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.